

# ಮಾನಸಗಂಗೋತ್ರಿ

ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಸಂಚಿಕೆ–2 | ಸಂಪುಟ–46 | ದಿನಾಂಕ–16/09/2016 | ಪುಟಗಳು–4

ಅವರಿಗೆ ಇಂದು ಅವಳಿ – ಜವಳಿ ಮಕ್ಕಳಿದ್ದಾರೆ ಪುಟ–2

ಮರೆಯಬೇಕೆಂದರೂ, ಮರೆಯಲಾರೆ ನಿನ್ನ ನಾ!



ಪುಟ–3

ಮಳೆರಾಯನಿಗೆ ಜಗ್ಗದ ಜಟ್ಟಿ ಮಯ್ಯಿಯ ಜನರು ಪುಟ–3

ಡಬಲ್ ಮೀನಿಂಗ್ ಡೈಲಾಗ್‌ಗಳ ಸರಮಾಲೆ



ಪುಟ–4

# ಯುವಸಂಭ್ರಮದಲ್ಲಿ ಮೊಳಗಿದ ಕಲಾ ಪ್ರದರ್ಶನಗಳ ಹಂಗಾಮ



ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗ ಮಂದಿರದಲಿ ನೆಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಯುವಕರನ್ನು ಬೆರಗು ಗೊಳಿಸಿದವು. ವರುಣನ ಸಿಂಚನದ ನಡುವೆಯು ಯುವಕರು ಉತ್ಸಾಹದಿಂದಲೇ ಕಾರ್ಯಕ್ರಮವನ್ನು ವಿಕ್ಷಿಸಿದರು. ಯುವ ಸಂಭ್ರಮದದಲ್ಲಿ ವಿದ್ಯಾರ್ಥಿಗಳ ಹೆಜ್ಜೆಗೆಜ್ಜೆ, ನಿನಾದ, ನೃತ್ಯ ವೈಭೋಗ ಗಳು ನೋಡುಗರನ್ನು ಬೆರಗುಗೊಳಿಸಿದವು.

ಮಾನಸಗಂಗೋತ್ರಿಯ ಬಯಲು ರಂಗ ಮಂದಿರದಲ್ಲಿ ವರ್ಣ ರಂಜಿತವಾಗಿ ಸಜ್ಜುಗೊಂಡಿದ್ದ ವೇದಿಕೆಯಲ್ಲಿ ವಿವಿಧ ಕಾಲೇಜು ತಂಡಗಳವರು ಆಕರ್ಷಕ ಪ್ರದರ್ಶನ ನೀಡಿ ನೆರೆದಿದ್ದವರು ಸಂತಸದ ಸಂಭ್ರಮದಲ್ಲಿ ಮಿಂದೇಳುವಂತೆ ಮಾಡುವಲ್ಲಿ ಯಶಸ್ವಿಯಾಗುವ ಜತೆಗೆ ಯುವಸಂಭ್ರಮಕ್ಕೆ ರಂಗು ತುಂಬಿದರು.

ಮೊದಲಿಗೆ ಮೈಸೂ–ರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ತಂಡದವರು ಮಹಿಷಾಸುರ ಮರ್ದಿನಿ ನೃತ್ಯರೂಪಕವನ್ನು ಭರತನಾಟ್ಯದ ಮೂಲಕ ಪ್ರದರ್ಶಿಸಿ ಗಮನ ಸೆಳೆದರು. ನಂದಿನಿ ನಂದಿತ ಮೇದಿನಿ ಎಂಬ ಗೀತೆಗೆ ನೃತ್ಯ ಮಾಡಿದ ಕಲಾವಿದರು ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸಿದರು. ಮಹಿಷಾಸುರ ಸಹಿತ ರಾಕ್ಷಸರನ್ನು ಸಂಹಾರ ಮಾಡುವ ದೃಶ್ಯವನ್ನು ಭರತನಾಟ್ಯದ ಮೂಲಕ ಪ್ರದರ್ಶಿಸಿದ ಕಲಾವಿದರಿಗೆ ಭಾರೀ ಕರತಾಡನದ ಬೆಂಬಲ ದೊರೆಯಿತು.

ನಂತರ ಮೈಸೂ–ರಿನ ವಿದ್ಯಾವರ್ಧಕ ಪ್ರಥ–'ಮದರ್ಜೆ ಕಾಲೇಜು ತಂಡದ 25ಕ್ಕೂ ಹೆಚ್ಚು ಕಲಾವಿದರು ಸ್ವಚ್ಛ ಭಾರತ ಅಭಿಯಾನ ನೃತ್ಯ ರೂಪಕವನ್ನು ಪ್ರದರ್ಶಿಸಿ ಮನರಂಜನೆಯ ಜತೆಗೆ ಚಿಂತನೆಗೂ ಹಚ್ಚಿದರು. ನೃತ್ಯ ರೂಪಕದಲ್ಲಿ ಬಂದ ಅಂ–ಧನೊಬ್ಬ ಯಾರೋ ತಿಂದು ಬಿಸಾಡಿದ್ದ ಬಾಳೆಹಣ್ಣಿನ ಸಿಪ್ಪೆ ತುಳಿದು ಬೀಳುವುದು, ತಿಂಡಿ ತಿಂದು ಅಲ್ಲೇ ತ್ಯಾಜ್ಯ ಬಿಸಾಡಿ ಅನೈರ್ಮಲ್ಯಕ್ಕೆ ಕಾರಣವಾಗುವುದು, ಉತ್ತಮ ಮಳೆಯಾಗಿ, ಕಾವೇರಿ ವಿವಾದ ಸುಗಮವಾಗಿ ಬಗೆಹರಿಯಲಿ. ಕಸದ ರಾಶಿ ತಾಂಡವವಾಡುವುದನ್ನು ಬಿಂಬಿಸುವ ವೇಷಧಾ–ರಿಗಳು ಅದರಿಂದ ಸೊಳ್ಳೆಗಳು ಹೆಚ್ಚಾಗುತ್ತವೆ ಎಂಬುದನ್ನು ತಿಳಿಸುವುದು, ಅನೈರ್ಮಲ್ಯ ಕಂಡು ಪ್ರವಾಸಿಗರು ಅಸಹ್ಯ ಪಡುವುದು, ಬಯಲು ಮಲ ಮೂತ್ರ ವಿಸರ್ಜನೆಯಿಂದ ರೋಗರುಜಿನಗಳು ಮುಂತಾದ ದೃಶ್ಯಗಳು ಬರುವುದು ಗೀತೆಯಲ್ಲಿ ಹಾದುಹೋದವು.

ಕೊನೆಯಲ್ಲಿ ಗಾಂಧೀಜಿ ಪಾತ್ರಧಾರಿ ಸ್ವಚ್ಛ ಭಾರತಕ್ಕೆ ಕರೆ ನೀಡಿದ ಪರಿಣಾಮ ಎಲ್ಲರಲ್ಲೂ ಜಾಗೃತಿ ಮೂಡುವುದು ಹಾಗೂ ಮೈಸೂರು ನಗರ ಸ್ವಚ್ಛ ನಗರ, ಇದರ ಹಿಂದೆ ಪೌರಕಾರ್ಮಿಕರ ಶ್ರಮ ಅಡಗಿದೆ ಎಂಬುದನ್ನು ಬಿಂಬಿಸುವ ದೃಶ್ಯಗಳು ಅರ್ಥವತ್ತಾಗಿದ್ದವು. ನಂತರ ಮೈಸೂರಿನ ನಟರಾಜ ಮಹಿಳಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಮಹಿಳಾ ಸಬಲೀಕರಣದ ನೃತ್ಯರೂಪಕ ಪ್ರದರ್ಶಿಸಿ ಮಹಿಳಾ ಸ್ವಾವಲಂಬನೆ, ಮಹಿಳೆಯರು ಶಿಕ್ಷಣ ಪಡೆಯುವ ಅಗತ್ಯ, ಹೆಣ್ಣು ಭ್ರೂಣ ಹತ್ಯೆ ಮುಂತಾದ ಅಂಶಗಳನ್ನು ನಿರೂಪಿಸುವ ನೃತ್ಯ ಮಾಡಿ ಸೈ ಎನಿಸಿಕೊಂಡರು.



ಚಿತ್ರದಲ್ಲಿ ಮಹಾಪೌರ ಬಿ.ಎಲ್.ಭೈರಪ್ಪ ಉದ್ಘಾಟಿಸಿದರು. ಎಸ್‌ಪಿ ರವಿ ಡಿ.ಚನ್ನಣ್ಣನವರ್, ಜಿಪಂ ಅಧ್ಯಕ್ಷೆ ನಯೀಮಾ ಸುಲ್ತಾನ್, ಜಿಪಂ ಉಪಾಧ್ಯಕ್ಷ ಜಿ.ನಟರಾಜ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಇದೇ ರೀತಿ ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು, ಹಾರ್ಡ್ವಿಕ್ ಸ್ವತಂತ್ರ ಪದವಿಪೂರ್ವ ಕಾಲೇಜು, ವಿವೇಕಾನಂದ ಸಂಯುಕ್ತ ಪದವಿಪೂರ್ವ ಕಾಲೇಜು, ಮೈಸೂರು ವಿವಿ ಸಂಜೆ ಕಾಲೇಜು, ಗುಡ್‌ಶೆಫರ್ಡ್ ಕಾಲೇಜು ಸೇರಿದಂತೆ 10ಕ್ಕೂ ಹೆಚ್ಚು ಕಾಲೇಜು ತಂಡಗಳು ಪ್ರದರ್ಶನ ನೀಡಿದವು.

ಇದಕ್ಕೂ ಮುನ್ನ ಅಮ್ಮ ರಾಮಚಂದ್ರ ತಂಡದವರು ಕೆಲವು ಗೀತೆಗಳನ್ನು ಹಾಡಿದರು. ಸಮಾರಂಭವನ್ನು ಜ್ಯೋತಿ ಬೆಳಗಿಸಿ ಮತ್ತು ಡೋಲು, ಕಂಸಾಳೆ ಬಾರಿಸುವ ಮೂಲಕ ಮಹಾಪೌರ ಬಿ.ಎಲ್.ಭೈರಪ್ಪ ಅವರು ಉದ್ಘಾಟಿಸಿ ನಂತರ ಈ ಬಾರಿಯ ದಸರಾ ಯುವ ಸಂಭ್ರಮ ಕಾರ್ಯಕ್ರಮ ನಮ್ಮ ನೆಲ, ಜಲ, ಸಂಸ್ಕೃತಿಯ ವಿಚಾರಗಳನ್ನು ಒಳಗೊಂಡಿರುವುದು ವಿಶೇಷವಾಗಿದೆ. ಮಳೆ ಅಭಾವದಿಂದ ಎಲ್ಲೆಡೆ ಆತಂಕ ನಿರ್ಮಾಣವಾಗಿದೆ. ಉತ್ತಮವಾಗಿ ಮಳೆಯಾಗಿ, ಕಾವೇರಿ ವಿವಾದ ಸುಗಮವಾಗಿ ಬಗೆಹರಿಯಲಿ. ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿದ ಈ ಸುಂದರ ನಾಡಿನ ನೆಲ, ಜಲ ಸಂರಕ್ಷಣೆಯನ್ನು ಎಲ್ಲರೂ ಸೇರಿ ಮಾಡೋಣ ಎಂದು ತಿಳಿಸಿ ಶುಭ ಕೋರಿದರು.

ಕಾರ್ಯ ಕ್ರಮದ ನಡುವೆ ಆಗಾಗ್ಗೆ ತುಂತುರು ಮಳೆಯಾಗುತ್ತಿದ್ದರೂ ಲೆಕ್ಕಿಸದೆ ಸಭಿಕರು ಯುವಸಂಭ್ರಮದ ಸವಿಯನ್ನು ಸವಿದರು. ಸಮಾರಂಭಕ್ಕೆಭಾರೀ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಪ್ರತಿಯೊಬ್ಬರನ್ನೂ ತಪಾಸಣೆ ಮಾಡಿ ಒಳಬಿಡಲಾಗುತ್ತಿತ್ತು. 20ಕ್ಕೂ ಹೆಚ್ಚು ಸಿಸಿ ಟಿವಿಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗಿತ್ತು.

ಯುವ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿಗಳೂ ಆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣನವರ್, ಜಿಪಂ ಅಧ್ಯಕ್ಷೆ ನಯೀಮಾ ಸುಲ್ತಾನ್ ನಜೀರ್ ಅಹ್ಮದ್, ಜಿಪಂ ಉಪಾಧ್ಯಕ್ಷ ಜಿ.ನಟರಾಜ್, ಯುವ ದಸರಾ ಉಪಸಮಿತಿ ಕಾರ್ಯದರ್ಶಿಯಾದ ಆದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಿ.ಎಸ್.ಸೋಮಶೇಖರ್, ಈ ಸಮಿತಿ ಕಾರ್ಯಾಧ್ಯಕ್ಷರೂ ಆದ ವಿಶೇಷ ಭೂಸ್ವಾಧೀನ ಅಧಿಕಾರಿ ಎಂ.ಆರ್.ರಾಜೇಶ್, ವಿಶೇಷ ಸಲಹೆಗಾರ ಎಂ.ಎನ್. ನಟರಾಜ್ ಮುಂತಾದವರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಖ್ಯಾತ ನೃತ್ಯ ಕಲಾವಿದೆ ಕೃಪಾ ಫಡ್ಕೆ, ಡಾ.ಪಿ.ಕೆ.ರಾಜಶೇಖರ್, ನೃತ್ಯ ಸಂಯೋಜಕ ಗಣೇಶ್, ಎನ್.ಸಿಂಧು ಕಾರ್ಯಕ್ರಮ ಹೊಣೆ ನಿರ್ವಹಿಸಿದರು.

–ಅಕ್ಷಯ್.ಕೆ




# ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು

ಮೈಸೂರು: ದನಿಯಿಲ್ಲದವರಿಗೆ ನೀವು ದನಿಯಾಗಬೇಕೆಂದು ಸಾರ್ವಜನಿಕ ಅಭಿವೃದ್ಧಿ ಸಂಸ್ಥೆ ನಿರ್ದೇಶಕ ಸ್ವಾನಿಯವರು ಕರೆ ನೀಡಿದರು.

ಮೈಸೂರು ವಿವಿ ಸಮಾಜ ಕಾರ್ಯ ವಿಭಾಗದ ವಿಚಾರ ಗೋಷ್ಠಿಯಲ್ಲಿ ಸಮಾಜ ಕಾರ್ಯ ವಿದ್ಯಾರ್ಥಿ ವೇದಿಕೆ ಉದ್ಘಾಟಿಸಿ ಮಾತನಾಡಿದರು.

ಸಮಾಜ ಕಾರ್ಯ ಶಿಕ್ಷಣದ ಮುಖ್ಯ ಉದ್ದೇಶ ಸಮಾಜ ಸೇವೆ. ಈ ವಿಭಾಗದ ವಿದ್ಯಾರ್ಥಿಗಳಾದ ನೀವು ವೃದ್ಧರು, ಮಕ್ಕಳು, ಮಹಿಳೆಯರು, ನಿರಾಶ್ರಿತರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿ ಕೊಳ್ಳಬೇಕು. ಮೈಸೂರು ವಿವಿ ಈ ವಿಭಾಗಕ್ಕೆ ಹಲವು ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ ಅದನ್ನು ಸದುಪಯೋಗ ಪಡಿಸಿಕೊಳ್ಳ ಬೇಕೆಂದು ತಿಳಿಸಿದರು.




ಚಿತ್ರದಲ್ಲಿ ಸಾರ್ವಜನಿಕ ಅಭಿವೃದ್ಧಿ ಸಂಸ್ಥೆ ನಿರ್ದೇಶಕ ಸ್ವಾನಿ ಡಾ.ಉಷಾರಾವ್, ವೇದಿಕೆ ಶಾಖೆ ಸಂಯೋಜನಾಧಿಕಾರಿ ಡಾ. ಎ.ಕೆ.ಮೋಹನ್, ವೇದಿಕೆ ಅಧ್ಯಕ್ಷೆ ಜೆ.ವಿ.ಸೌಮ್ಯ ಇದ್ದಾರೆ.

ಪ್ರಸ್ತುತ ಮಾಧ್ಯಮಗಳಲ್ಲಿ ಶೇ.50 ಭಾಗದಷ್ಟು ಕೊಲೆ, ಅತ್ಯಾಚಾರ, ಅನ್ಯಾಯ, ಭ್ರಷ್ಟಾಚಾರ ವಿಷ ಯಗಳೇ ರಾರಾಜಿಸುತ್ತವೆ. ಈ ನಡುವೆ ಸಮಾಜದಲ್ಲಿ ಪ್ರೀತಿ ಮತ್ತು ನ್ಯಾಯ ಸ್ಥಾಪನೆಗಾಗಿ ನಾವು ಶ್ರಮಿಸಬೇಕಿದೆ. ಅಂತ ಸಮಾಜ ಸೇವೆ ಜವಬ್ದಾರಿ ಹೊತ್ತ ನೀವೆ ವೈದ್ಯರು. ಉತ್ತಮ ಸಮಾಜ ಕಟ್ಟು ವಲ್ಲಿ ಪ್ರಮುಖ ಪಾತ್ರ ವಹಿಸುವ ನೀವೆ ಅಭಿಯಂತರು ಎಂದು ಶ್ಲಾಘಿಸಿದರು.

ಒಂದೆ ಸಣ್ಣಪುಟ್ಟ ಸಮಸ್ಯೆಗಳಿಗೂ ದೊಡ್ಡ ಮಟ್ಟದ ಹೋರಾಟಗಳಾಗುತ್ತಿದ್ದವು . ಆದರೆ ಇಂದು ಚಳುವಳಿಗಳು ಸತ್ತು ಹೋಗಿವೆ. ರಾಜಕೀಯವಾಗಿ ಯುವ ಶಕ್ತಿಗಳನ್ನು ಹತ್ತಿಕ್ಕಲಾ ಗುತ್ತಿದೆ. ಇದು ಸಾಮಾಜಿಕ ದೌರ್ಬಲ್ಯವೇ ಸರಿ. ನಮ್ಮ ಯುವ ಜನತೆ ಒಗ್ಗಟ್ಟಾಗಿ ಸಾಮಾಜಿ–ಕ ಸಮಸ್ಯೆಗಳನ್ನು ಕುರಿತು ಚಿಂತಿಸುವ ಅಗತ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕಿ ಡಾ.ಉಷಾರಾವ್, ವೇದಿಕೆ ಶಾಖೆ ಸಂಯೋಜನಾಧಿಕಾರಿ ಡಾ. ಎ.ಕೆ. ಮೋಹನ್, ವೇದಿಕೆ ಅಧ್ಯಕ್ಷೆ ಜೆ.ವಿ.ಸೌಮ್ಯ ಉಪಸ್ಥಿತರಿದ್ದರು.

– ಭೀಮಣ್ಣ ಮಾದೆ

**ಹಿತನುಡಿ**

ಅಸಮಾನತೆಯಿಂದ ಹಿಂಸೆ ಹುಟ್ಟಿಕೊಳ್ಳುತ್ತದೆ. ಸಮಾನತೆಯಿಂದ ಅಹಿಂಸೆ ಹುಟ್ಟಿಕೊಳ್ಳುತ್ತದೆ.

**–ಮಹಾತ್ಮ ಗಾಂಧೀಜಿ**


## ಸಂಪಾದಕರ ಮಂಡಳಿ

**ಪ್ರಧಾನ ಸಂಪಾದಕರು : ಡಾ|| ಸಿ ಕೆ. ಪುಟ್ಟಸ್ವಾಮಿ**

ವಿದ್ಯಾರ್ಥಿ ಸಂಪಾದಕರು : ಅಕ್ಷಯ್.ಕೆ
ಭೀಮಣ್ಣ ಮಾದೆ
ಚಂದ್ರಶೇಖರ.ಬಿ
ಚೈತ್ರ. ಎಚ್. ಎಸ್
ಕಾವ್ಯಶ್ರಿ.ಎಸ್.ಎನ್


## ಸಂಪಾದಕೀಯ

# ಸಂಚಾರಿ ಜಾಗೃತಿ, ವಾಹನ ಸವಾರರಿಗೆ ಭೀತಿ

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಎಲ್ಲಿ ನೋಡಿದರು ಸಂಚಾರಿ ಪೋಲಿಸರು ಕಾಣಸಿಗುತ್ತಾರೆ, ಏಕೆಂದರೆ ಸಂಚಾರಿ ನಿಯಮ ಪಾಲನೆ ಮಾಡದಿರುವ ವಾಹನ ಸವಾರರನ್ನು ಅಡ್ಡಗಟ್ಟಿ ದಂಡ ವಿಧಿಸುವ ಸಲುವಾಗಿ ರಣ ಹದ್ದುಗಳಂತೆ ಕಾಯುತ್ತ ನಿಂತಿರುವುದು ಸರ್ವೆಸಾಮಾನ್ಯವಾಗಿದೆ. ಆದರೆ ಅಡ್ಡಗಟ್ಟುವ ವಿಧಾನ ಮಾತ್ರ ವಾಹನ ಸವಾರರನ್ನು ದಿಗ್ಭ್ರಮೆ ಮೂಡಿಸುತ್ತದೆ. ಇದರಿಂದ ಭಯಭಿತರಾಗಿ ಓಡಿಹೋಗುವ ಪ್ರಯತ್ನ ಮಾಡಿ ಅಪಘಾತಕೀಡಾಗುತ್ತಿರುವುದು ಇಂದು ಸಾಮಾನ್ಯವಾಗಿಬಿಟ್ಟಿದೆ. ಇದಕ್ಕೆ ತಾವು ಕಾರಣವಲ್ಲ ಎಂದು ಅವರು ವರ್ತಿಸುತ್ತಿದ್ದಾರೆ. ರಕ್ಷಕರಾದ ಪೋಲಿಸರೇ ಭಕ್ಷಕರ ರೀತಿ ವರ್ತಿಸುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಯ ಸಿಗ್ನಲ್ಗಳಲ್ಲಿ, ರಸ್ತೆ ತಿರುವಿನ ಮರದ ಮರೆಯಲ್ಲಿ ಇಲ್ಲವೆ, ಬಸ್‌ನಿಲ್ದಾಣದ ಮರೆಯಲ್ಲಿ ನಿಂತು ನಿಯಮ ಪಾಲನೆ ಮಾಡದವರನ್ನು ತಡೆದು ನಿಲ್ಲಿಸುತ್ತಾ, ಮೇಲಾಧಿಕಾರಿಗಳು ಮರೆಯಲ್ಲಿ ನಿಂತು ದಂಡ ವಿಧಿಸುತ್ತಿದ್ದರೆ, ಹೋಮ್ ಗಾರ್ಡ್‌ಗಳು ಬಹುದೂರ ನಿಂತು ನಿಯಮ ಉಲ್ಲಂಘಿಸಿದವರನ್ನು ಗುರುತಿಸಿ ಪಿಸಿಗಳಿಗೆ ಕೂಗಿ ಹೇಳುತ್ತಾರೆ, ಮುಂದೆ ಅವರನ್ನು ತಡೆದು ಬೀಗ ಕಿತ್ತುಕೊಂಡು ಹೋಗಿಬಿಡುತ್ತಾರೆ. ಇಂದು ಸಾರಿಗೆ ನಿಯಮ ಪಾಲಿಸದವರು ಹೆಚ್ಚಾಗಿ ದ್ವಿಚಕ್ರ ವಾಹನ ಸವಾರರೆ ಹೆಚ್ಚಾಗಿದ್ದಾರೆ. ಹಿಂಬದಿ ಸವಾರರಿಗು ಹೆಲ್ಮೆಟ್ ಕಡ್ಡಾಯವಾದ್ದರಿಂದ ಈ ನಿಯಮ ಪಾಲನೆಗಾಗಿ, ಪಾಲಿಸದವರ ಮೇಲೆ ದಂಡ ವಿಧಿಸುವ ಮೂಲಕ ಜಾಗೃತಿ ಮೂಡಿ ಸುವುದಾಗಿ ಅವರು ಸಮಜಾಹಿಸಿ ನೀಡುತ್ತಾರೆ.

ಆದರೆ ಇದಕ್ಕೆ ಬಳಸಿರುವ ಮಾರ್ಗ ಮಾತ್ರ ಬಹಳ ಅಪಾಯಕಾ–ರಿಯಾದದ್ದು, ದಿಡೀರನೆ ರಸ್ತೆಯಲ್ಲಿ ಕಾಣಿಸುವ ಪೋಲಿಸರನ್ನು ಕಂಡು ವಾಹನ ಸವಾರರು ದಂಡ ಕಟ್ಟುವ ಸಲುವಾಗೊ, ಇಲ್ಲ ಅವಾಚ್ಯಶಬ್ದದಿಂದ ನಿಂದಿಸುವರು ಎಂಬ ಭಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂತಹ ಸಂಧರ್ಭದಲ್ಲಿ ಅಪಘಾತವಾಗಿ ಪ್ರಾಣವನ್ನೇ ಕಳೆದುಕೊಳ್ಳುವ ಪ್ರಸಂಗಗಳು ನಡೆಯುತ್ತಿವೆ. ಮುಂದೆ ಪೋಲೀಸರು ಇದ್ದರೆಂದು ತಿಳಿದೊಡನೆ ಹಿಂದುಗಡೆಯಿಂದ ಯಾರು ಬರುತ್ತಾರೆ ಎಂದು ನೋಡದೆ ವಾಹನದ ಚಲನೆಯ ದಿಕ್ಕನ್ನೆ ಬದಲಿಸುತ್ತಾರೆ. ಆ ಸಂಧರ್ಬದಲ್ಲಿ ಹಿಂದೆ ಬರುವು ಲಾರಿಗೊ, ಬಸ್ಸು ಇಲ್ಲ ಕಾರಿಗೆ ಸಿಲುಕಿ ಪ್ರಾಣ ಬಿಡುತ್ತಾರೆ. ಪೋಲೀಸರು ಇದಕ್ಕೆ ತಾವು ಕಾರಣರಲ್ಲ ಎಂದು ನುಣಿಚಿಕೊಳ್ಳುತ್ತಾರೆ.

ಇತ್ತೀಚೆಗೆ ಅಪಘಾತಗಳು ಹೆಚ್ಚಾಗುತ್ತಿದ್ದು ಹೆಚ್ಚು ಬಲಿಯಾಗುತ್ತಿರುವವರು ದ್ವಿಚಕ್ರ ವಾಹನ ಸವಾರರೆ ಆಗಿದ್ದಾರೆ, ಇದಕ್ಕಾಗಿ ಹಿಂಬದಿ ವಾಹನ ಸವಾರ–ರಿಗೂ ಹೆಲ್ಮೆಟ್ ಕಡ್ಡಾಯ ಮಾಡಿ ನಿಯಮ ಜಾರಿಗೆ ತಂದಿದ್ದಾರೆ. ಈ ಹಿಂದೆ ದ್ವಿಚಕ್ರ ವಾಹನ ಸವಾರರಿಗೆ ಮಾತ್ರ ಹೆಲ್ಮೆಟ್ ಕಡ್ಡಾಯಗೊಳಿಸಲಾಗಿತ್ತು. ಸರ್ಕಾರದ ಕ್ರಮ ಮತ್ತು ಸುಪ್ರೀಂ ಕೋರ್ಟ್ ನಿರ್ದೇಶನದಂತೆ, ಅಧಿಸೂಚನೆ ಮೋಟಾರ್ ವಾಹನದ ಕಾಹಿದೆ 1988ರ 138 ನೆ ವಿಭಾಗ ಅಡಿಯಲ್ಲಿ ನಿಯಮ ರೂಪಿಸಲಾಗಿದೆ ಎಂದು ಹೇಳುತ್ತಾರೆ.

ಆದರೆ ಈ ನಿಯಮವನ್ನು ವಾಹನ ಸವಾರರು ಪಾಲಿಸುತ್ತಿರಲಿಲ್ಲ ಇದಕ್ಕಾಗಿ ದಂಡ ವಿಧಿಸುವ ಕಾರ್ಯ ಕೈಗೊಳ್ಳುತ್ತಾ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ಪೋಲಿಸರು ಉತ್ತರ ನೀಡುತ್ತಾರೆ. ದಂಡ ವಿಧಿಸುವುದು ಸರಿ ಆದರೆ ವಾಹನದ ಬೀಗದ ಕೀ ಕಸಿದು ಕೊಳ್ಳುವ ಹಕ್ಕು ನೀಡಿದವರು ಯಾರು. ಬೀಗಕಸಿದುಕಂಡು ತಾವಿರುವಲ್ಲಿಗೆ ತಳ್ಳಿಕೊಂಡುಬರುವಂತೆ ಮಾಡುತ್ತಾರೆ. ಇದಕ್ಕೆ ಅವರನ್ನು ಪ್ರಶ್ನಿಸಿದರೆ ಅವಾಚ್ಯಶಬ್ದಗಳಿಂದ ನಿಂದಿಸುತ್ತಾರೆ, ಇಲ್ಲವೆ ಅವರ ಮೇಲೆ ಅಲ್ಲೆ ನಡೆಸುತ್ತಾರೆ. ಸಾರ್ವಜನಿಕ ರಕ್ಷಣೆಗಾಗಿ ಇರುವ ಅವರು ಈ ರೀತಿ ವರ್ತಿಸುತ್ತಿರುವುದು ಎಷ್ಟುಸರಿ.

ವಾಹನ ಸವಾರರದು ಇದರಲ್ಲಿ ತಪ್ಪಿದೆ, ಸಂಚಾರಿ ನಿಯಮ ಪಾಲಿಸದೆ ಪೋಲಿಸರಿಂದ ತಪ್ಪಿಸಿಕ್ಕೊಳ್ಳಲು ಪ್ರಯತ್ನಿಸಿ ತೊಂದರೆಗೀಡಾಗುತ್ತಾರೆ. ಮುಂದೆ ವಾಹನೆ ಹಿಡಿಯುತ್ತಿದ್ದಾರೆಂದು ತಿಳಿದರೆ ಚಲಿಸುವ ದಿಕ್ಕನ್ನೆ ಬದಲಿಸಿಬಿಡುತ್ತಾರೆ, ಇಲ್ಲವೆ ವೇಗವನ್ನು ಹೆಚ್ಚಿಸಿಕೊಂಡು ಮುನ್ನುಗ್ಗುತ್ತಾರೆ. ಗಾಡಿಹಿಡಿಯಲುಬಂದ ಪೋಲಿಸರು ಆಯತಪ್ಪಿ ಬೀಳುತ್ತಾರೆ ಇಲ್ಲವೆ ಗಲಿಬಿಲಿಯಾಗಿ ಸವಾರರೆ ಬಿದ್ದು ಯಾವುದಾದರು ವಾಹನದಡಿಗೆ ಸಿಲುಕಿಬಿಡುತ್ತಾರೆ. ಇಂದಿನ ಯುವ ಸಮುದಾಯವೆ ಇದಕ್ಕೆ ಹೆಚ್ಚು ಬಲಿಯಾಗುತ್ತಿದ್ದಾರೆ. ವಾಹನ ಚಲಾಯಿಸಲು ಪರವನಾಗಿ ಇಲ್ಲದೆ, ನಿಯಮಿತ ವಯಸ್ಸಾಗಿರದವರೆ ಹೆಚ್ಚು ಸಿಕ್ಕಿಹಾಕಿಕ್ಕೊಳ್ಳುತ್ತಾರೆ.

ಇನ್ನು ಮೇಲಾದರು ಸಂಚಾರಿ ಪೋಲಿಸರು ಮತ್ತು ಅಧಿಕಾರಿಗಳು ಇತ್ತೀಚೆಗೆ ನಿಯಮ ಪಾಲಿಸದವರಿಗೆ ಛಾಯಚಿತ್ರ ತೆಗೆದು ಮನೆಗೆ ದಂಡದ ಪ್ರಮಾಣದ ಪತ್ರರವಾನಿಸು ಮಾರ್ಗವನ್ನು ಅನುಸರಿಸಿ, ಪ್ರಯಾಣಿಕರ ಸುರಕ್ಷತೆಗೆ ಸಹಕರಿಸಬೇಕು, ಇಲ್ಲದಿದ್ದರೆ ಇನ್ನಷ್ಟು ಮಂದಿ ಪ್ರಾಣ ಕಳೆದುಕೊಳ್ಳುವುದಂತು ಖಂಡಿತ.

# ತಮಿಳುನಾಡಿಗೆ ಅಮ್ಮ ಕರ್ನಾಟಕಕ್ಕೆ ಗುಮ್ಮ

ಮೊನ್ನೆ ಮೊನ್ನೆಯಷ್ಟೇ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಸತತ ಎರಡನೆ ಭಾರಿಗೆ ಮುಖ್ಯಮಂತ್ರಿಯಾಗಿ, ಆರು ಬಾರಿ ತಮಿಳುನಾಡು ಮುಖ್ಯ ಮಂತ್ರಿಯಾಗಿ ಇತಿಹಾಸ ನಿರ್ಮಿಸಿದ ಜಯಲಲಿತ ಅಲ್ಲಿ ಅಮ್ಮ ಎಂದೆ ಚಿರಪ–



ರಿಚಿತ. ತನ್ನ ಮೇಲೆ ಎಷ್ಟೇ ಭ್ರಷ್ಟಾಚಾರ ಆರೋಪವಿದ್ದರು ಜನರ ಮನಸ್ಸಿನಲ್ಲಿ ಆಳವಾಗಿ ಅಂಟಿ ಕೊಂಡಿದ್ದಾರೆ. ತಮ್ಮ ಸುತ್ತಮುತ್ತಲಿನ ರಾಜ್ಯಗಳಿಗೆ ತೊಂದರೆ ಗಳನ್ನು ಕೊಡುತ್ತಿರುವ ಜಯಲಲಿತ ಅವರು ತಮಿಳು ನಾಡಿಗೆ ಅಮ್ಮ ಕರ್ನಾಟಕಕ್ಕೆ ಗುಮ್ಮವಾಗಿಬಿಟ್ಟಿದ್ದಾರೆ.

ತಮಿಳು ನಾಡಿನಲ್ಲಿ ಜಯಲಲಿತ ಅವರು ಅಮ್ಮ ಅನ್ನ–ಸಾಂಬರ್, ಅಮ್ಮ ಇಡ್ಲಿ, ಅಮ್ಮ ಪಾತ್ರೆ, ಅಮ್ಮ ನೀರು, ಅಮ್ಮ ಕ್ಯಾಂಟೀನ್, ಅಮ್ಮ ಅಕ್ಕಿ, ಅಮ್ಮ ಭಾಗ್ಯ ಮೊದಲಾದವುಗಳಿಂದ ಅಲ್ಲಿ ಹೆಸರುವಾಸಿಯಾಗಿದ್ದಾರೆ. ಏಕೆಂದರೆ ಕಾವೇರಿ ನೀರು ವಿವಾದದಲ್ಲಿ ಕುಕ್ಯಾತಿಗೆ ಗು–ರಿಯಾಗಿದ್ದಾರೆ. ಅದಲ್ಲದೆ ಜಯಲಲಿತ ಅವರು ಹುಟ್ಟಿದ್ದು ಕರ್ನಾಟಕದಲ್ಲೆ.

ಜಯಲಲಿತ ಅವರು 24/02/1948 ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲು ಕೋಟೆಯಲ್ಲಿ ಜನಿಸಿದರು. ಹುಟ್ಟಿದ್ದು ಕರ್ನಾಟಕದಲ್ಲೆಯಾದರು ನೆಲೆ ಕಂಡಿದ್ದು ತಮಿಳುನಾಡಿನಲ್ಲಿ, ತಮಿಳು ಚಿತ್ರರಂಗದಲ್ಲಿ. ತಮಿಳು ಚಿತ್ರರಂಗದಲ್ಲಿ 140 ಸಿನೆಮಾಗಳಲ್ಲಿ ನಟಿಸಿ, ತಮ್ಮ ವಿಶಿಷ್ಟ ನಟನೆಯಿಂದ ತಮಿಳನಾಡಿನ ಅನಭಿಷಿಕ್ತ ನಟಿಯಾಗಿ 2 ದಶಕಗಳ ಕಾಲ ಮೆರದಾಡಿದರು. ಇದಾದ ನಂತರ ಬಂದಿದ್ದೆ ರಾಜಕೀಯಕ್ಕೆ.

1991 ರಿಂದ2016 ರ ವರಗೆ ಆರು ಭಾರಿ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿದ ಅವರು ಭಾರತೀಯ ರಾಜಕೀಯ ನಾಯಕರಲ್ಲಿ ಅವರು ಒಬ್ಬರು. ತಮ್ಮ ರಾಜಕೀಯ ಜೀವನದಲಿ ಏರುವುದನ್ನು ಕಂಡಿರುವ ಇವರು ಇದರ ಮಧ್ಯೆ ಹಲವಾರು ಆರೋಪಗಳಿಗೆ ಗುರಿಯಾಗಿದ್ದಲ್ಲದೆ, ತಮಿಳನಾಡಿನಲ್ಲಿ ತಮ್ಮ ವಿಶಿಷ್ಟ ಯೋಜನೆಗಳ ಮೂಲಕ ತಮಿಳು ಜನತೆಯ ಮನಸ್ಸಿನಲ್ಲಿ ಬೇರೂರಿ ಬಿಟ್ಟದ್ದಾರೆ. ಅದು ಎಷ್ಟರ ಮಟ್ಟಿಗೆ ಎಂದರೆ ಭ್ರಷ್ಟಾಚಾರದ ಆರೋಪದ ಮೇಲೆ ನ್ಯಾಯಾಂಗ ಬಂಧನಕ್ಕೆ ಒಳಗಾದಾಗ ತಮಿಳು ನಾಡಿನಿಂದ ಕರ್ನಾಟಕಕ್ಕೆ ಬಂದು ಅವರ ಪರ ನಿಂತಿದ್ದು. ತಮಿಳುನಾಡು ಬಂದ್ ಮಾಡಿದ್ದು, ಕೆಲವರು ತಮ್ಮ ಪ್ರಾಣ ವನ್ನೆ ಕಳೆದುಕೊಂಡರು, ಜೊತೆಗೆ ಮತ್ತೊಮ್ಮೆ ಮುಖ್ಯ ಮಂತ್ರಿಯಾಗಿ ಆಯ್ಕೆಯಾಗಿದ್ದೆ ಇದಕ್ಕೆ ಸಾಕ್ಷಿ.

ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಜಯಲಲಿತ ಅವರು ಭ್ರಷ್ಟಚಾರ ನಡೆಸಿದ್ದಾರೆ ಎಂದು ಅವರ ಮೇಲೆ ಮೊಕದಮ್ಮೆ ಹೂಡಲಾಗಿತ್ತು ಇದರ ಕೇಸು ಈಗಲು ನ್ಯಾಯಾಲಯದ ಮುಂದಿದೆ. ಇದರ ವಿಚಾರಣೆಯು ಕರ್ನಾಟಕದ ನ್ಯಾಯ ಮಂಡಳಿಯಡಿಯಲ್ಲಿ ವಿಚಾರಣೆ ನಡೆಸುತ್ತಿದೆ. ಆಗಾಗ್ಗ ಕರ್ನಾಟಕ್ಕೆ ಬಂದು ನ್ಯಾಯಾಲಯಕ್ಕೆ ಹಾಜರಾಗುತ್ತಿರುತ್ತಾರೆ. ಜಯಲಲಿತ ರವರಿಗೆ ಮಕ್ಕಳಿಲ್ಲ ಆದ–'ರು ತಮ್ಮ ದತ್ತು ಪುತ್ರನ ಮದುವೆಗೆಂದು 100 ಕೋಟಿ ಖರ್ಚು ಮಾಡಿದ್ದಾರೆಂದು ಸುದ್ಧಿ ಹರಿದಾಡುತ್ತಿದೆ, ನ್ಯಾಯಾಲಯ ಇದರ ಸತ್ಯ ಸತ್ಯತೆಗಳ ಬಗ್ಗೆ ವಿಚಾರಣೆ ನಡೆಸುತ್ತಿದೆ.

ಕೆಲವು ತಿಂಗಳ ಹಿಂದೆ ಇದೇ ಕೇಸಿನಡಿ ತೀರ್ಪು ಪ್ರಕಟವಾಗಿ 100 ಕೋಟಿ ದಂಡ ಮತ್ತು ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಅಧಿಕಾರದಲ್ಲಿದ್ದಾಗಲೇ ಜೈಲು ಸೇರಿದ ಮೊದಲ ಮುಖ್ಯಂಂತ್ರಿ ಎಂಬ ಕುಖ್ಯಾತಿಗೆ ಒಳಗಾಗಿದ್ದಾರೆ. ಆದರು ಉನ್ನತ ನ್ಯಾಯಾಲಯಕ್ಕೆ ಮೊರೆ ಹೋಗಿ ನಿರಪರಾಧಿ ಎಂದು ಹೊರಬಂದು ಮತ್ತೆ ಮುಖ್ಯಮಂತ್ರಿಯಾದರು. ಇಷ್ಟು ಭಾರಿ ಮುಖ್ಯಮಂತ್ರಿಯಾದರು ಅವರಿಗಿನ್ನು ಅಧಿಕಾರದ ಧಾಹ ಕಡಿಮೆಯಾಗಿಲ್ಲ. 2016 ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಮತ್ತೊಮ್ಮೆ ಮುಖ್ಯಮಂತ್ರಿಯಾಗಿದ್ದಾರೆ.

ಹುಟ್ಟಿದ್ದು ಕರ್ನಾಟಕದಲ್ಲೆ ಆದರು ಕರ್ನಾಟಕದ ಮೇಲೆ ಅದ್ಯಾವ ದ್ವೇಷವೋ ಗೊತ್ತಿಲ್ಲ. ಪದೆ ಪದೆ ಕರ್ನಾಟಕವನ್ನು ಕೆಣ–ಕುತ್ತ ಬರುತ್ತಿದ್ದಾರೆ. ಕಾವೇರಿ ನದಿ ನೀರಿನ ಹಂಚಿಕೆ ವಿಚಾರವಾಗಿ ಆಗಾಗ ಜಗಳ ತರುತ್ತಿರುತ್ತಾರೆ. ಇದರಿಂದ ಎರಡು ರಾಜ್ಯಗಲನಡುವೆ ಇಂದು ಒಬ್ಬರನ್ನು ಕಂಡರೆ ಇನ್ನೊಬ್ಬರಿಗಾಗದ ಪರಿಸ್ಥಿತಿ ಉಂಟಾಗಿದೆ. ಪ್ರತಿಯೊಂದು ವಿಷಯದಲ್ಲು ಜಗಳ–ಪೈಪೋಟಿ ಉಂಟಾಗುತ್ತಿದೆ. ಜಯಲಲಿತ ಅವರು ತಮ್ಮ ಅಮ್ಮ ಬ್ರಾಂಡ್ ನಿಂದ ತಮಿಳುನಾಡಿನ ಜನರನ್ನು ತಮ್ಮತ್ತ ಸೆಳದಿಟ್ಟಿಕೊಂಡಿದ್ದಾರೆ ಎನ್ನಬಹುದು.

**ಅಕ್ಷಯ್.ಕೆ**

## ಪುಸ್ತಕ ವಿಮರ್ಶೆ

# ಅವರಿಗೆ ಇಂದು ಅವಳಿ ಮಕ್ಕಳಿದ್ದಾರೆ

**ಪುಸ್ತಕ : 2 States**
**ಲೇಖಕರು: ಚೇತನ್ ಭಗತ್**
**ವಿಭಾಗ: ಕಾದಂಬರಿ**
**ಭಾಷೆ: ಇಂಗ್ಲೀಷ್**
**ಒಟ್ಟು ಪುಟಗಳು: 269**




2 States ಈ ಕಾದಂಬ–ರಿಯನ್ನು ಚೇತನ್ ಭಗತ್‌ರವರು ರಚಿಸಿದ್ದಾರೆ. ಇದರಲ್ಲಿ ಅವರು ತಮ್ಮ ವೈವಾಹಿಕ ಜೀವನವನ್ನೇ ಕಾದಂಬ–ರಿಯಾಗಿ ಬರೆದಿದ್ದಾರೆ. ಈ ಕಾದಂಬರಿಯು ಯುವಕ(krish Malhotra)ಪಂಜಾಬಿ ಕುಟುಂಬ ಮತ್ತು ಯುವತಿಯ(Ananya swaminathan) ತಮಿಳಿಯನ್ ಕುಟುಂಬ ಪ್ರೇಮ ಕಥೆಯನ್ನು ವರ್ಣಿಸುತ್ತದೆ. ತಮ್ಮ ಪ್ರೀತಿಯಲ್ಲಿ ಜಾತಿ, ಧರ್ಮದ ಹೋರಾಟ ಹಾಗೂ ಮದುವೆಯ ಬಯಕೆ ಹಾಗೂ ತಮ್ಮ ಕುಟುಂಬವನ್ನು ಮದುವೆಗೆ ಒಪ್ಪಿಸಲು ಪಟ್ಟ ಶ್ರಮವನ್ನು ಯುವಜನಾಂಗವು ಕುತೂಹಲದಿಂದ ಓದುವ ಹಾಗೆ ಚಿತ್ರಿಸಿದ್ದಾರೆ.

ಅನನ್ಯಾ ಮತ್ತು ಕ್ರಿಶ್ ಅಹಮದಾಬಾದ್‌ನ IIM ಕಾಲೇಜಿನಲ್ಲಿ ಭೇಟಿಯಾಗಿ ಒಳ್ಳೆಯ ಸ್ನೇಹಿತರಾಗಿ, ನಂತರ ಅವರ ಸ್ನೇಹವು ಪ್ರೀತಿಯಾಗಿ ತಿರುಗುತ್ತದೆ. ಸಮಯ ಕಳೆಯುತ್ತಾ ಅವರಿಗೆ ತಾವು ಇಷ್ಟಪಟ್ಟ



ಕಂಪನಿಗಳಲ್ಲೇ ಕೆಲಸ ಸಿಗುತ್ತದೆ. ಅನನ್ಯಾಳನ್ನು ಮರೆಯದ ಕ್ರಿಶ್ ಆಕೆಯನ್ನು ಮದುವೆಯಾಗಲು ಬಯಸುತ್ತಾನೆ, ಇದಕ್ಕೆ ಅನನ್ಯಾ ಸಹ ಒಪ್ಪಿಗೆಯನ್ನು ನೀಡುತ್ತಾಳೆ. ಇಬ್ಬರದು ಬೇರೆ ಬೇರೆ ಜಾತಿ ಹಾಗೂ ಪರಂಪರೆಯಿಂದ ಬಂದ ಇವರು ತಮ್ಮ ಪೋಷಕರನ್ನು ಮದುವೆಗೆ ಒಪ್ಪಿಸಲು ತೀರ್ಮಾನಿಸುತ್ತಾರೆ. ಇದಕ್ಕೆ ಕ್ರಿಶ್ ತನ್ನ ಕಂಪನಿಯವರಿಗೆ ಚೆನ್ನೈಗೆ ತನ್ನ ಕೆಲಸವನ್ನು ವರ್ಗಾವಣೆ ಮಾಡಲು ವಿನಂತಿಸಿ, ಚೆನ್ನೈಗೆ ಬಂದು ಅನನ್ಯಾಳ ಕುಟುಂಬದ ಎಲ್ಲಾ ಸದಸ್ಯರ ಮನಗೆದ್ದು ಮದುವೆಗೆ ಒಪ್ಪಿಸುತ್ತಾನೆ. ನಂತರ ಕ್ರಿಶ್ ಅನನ್ಯಾಳನ್ನು ತನ್ನ ಮನೆಗೆ ಕರೆದುಕೋಂಡು ಹೋಗುತ್ತಾನೆ. ಕ್ರಿಶ್‌ನ ತಂದೆ ಬಿಟ್ಟು ಎಲ್ಲರೂ ಅನನ್ಯಾಳನ್ನು ನಿಂದಿಸುತ್ತಾರೆ, ನಂತರ ಕ್ರಿಶ್‌ನ ದೂರದ ಸಂಬಂಧಿಯ ಮದುವೆಯಲ್ಲಿ ಆದ ಘಟನೆಯಲ್ಲಿ ಅನನ್ಯಾಳ ಬುದ್ಧಿವಂತಿಕೆಯನ್ನು ಮೆಚ್ಚಿ ಕ್ರಿಶ್ ಮನೆಯಲ್ಲಿ ಒಪ್ಪಿಗೆಯನ್ನು ನೀಡುತ್ತಾರೆ.

ಮತ್ತೆ ತಮ್ಮ ತಮ್ಮ ಧರ್ಮ ಮತ್ತು ಜಾತಿಯ ಕಾರಣ ಎರಡೂ ಕುಟುಂಬದಲ್ಲಿ ಕಲಹವಾಗಿ ಮದುವೆ ನಿಲ್ಲುತ್ತದೆ. ಕ್ರಿಶ್ ತನ್ನ ಸಂಕಟವನ್ನು ಅವನ ತಂದೆಯ ಬಳಿ ಹೇಳಿಕೊಳ್ಳುವ ಹಾಗೆ ಇರಲಿಲ್ಲ, ಮಗನ ಈ ವೇದನೆಯನ್ನು ಕಂಡು ತಂದೆಯೇ ಎಲ್ಲರನ್ನು ಒಪ್ಪಿಸಿ ಕ್ರಿಶ್ ಮತ್ತು ಅನನ್ಯಾಳ ಮದುವೆಯನ್ನು ಮಾಡಿಸುತ್ತಾರೆ. ಇಂದು ಅವರಿಗೆ ಅವಳಿ–ಜವಳಿ ಮಕ್ಕಳಿದ್ದಾರೆ.

**–ಚೈತ್ರ ಹೆಚ್. ಎಸ್**

# ಮರೆಯಬೇಕೆಂದರೂ, ಮರೆಯಲಾರೆ ನಿನ್ನ ನಾ!



ಬಾಂಧವ್ಯಗಳು ಹೀಗೂ ಬೆಸೆದುಕೊಳ್ಳಬಹುದು ಎಂಬುದಕ್ಕೆ ನೀನು ಸಾಕ್ಷಿಯಾದೆ. ಜಗಳದಿಂದ ಪ್ರಾರಂಭವಾಗುವ ಪ್ರೀತಿ ಶಾಶ್ವತ ಎಂಬುದೊಂದು ಮಾತಿದೆ. ಅದನ್ನು ಸಿನಿಮಾಗಳಲ್ಲಿ ಕಾಣುತ್ತಲೇ ಇದ್ದೇವೆ. ಆ ದರೆ ಸ್ನೇಹವೂ ಸಹ ಜಗಳದಿಂದ ಪ್ರಾರಂಭವಾಗಿ ಹೆಮ್ಮರವಾಗಿ ಬೆಳೆದು ಅದಕ್ಕೆ ಭಾವನಾತ್ಮಕತೆಯ ಮೆರಗು ಸಿಗಬಹುದೆಂಬ ಕಲ್ಪನೆಯೂ ಇರಲಿಲ್ಲ ಗೆಳತಿ.

ನೀನೆಂದರೆ ನೀನೇ, ನನ್ನ ಮುದ್ದಿನ ಅರಸಿ ಪ್ರೀತಿಯೆಂದರೂ, ಆತ್ಮೀಯತೆ ಎಂದರೂ ಅದಕ್ಕೆ ನನ್ನಲ್ಲಿರುವ ಒಂದೇ ಉತ್ತರ ನೀನು. ನೀನು ಎಂದಾಕ್ಷಣ ಮನಸ್ಸಿಗೆ ಬರುವುದು ನಿನ್ನ ಉದ್ದನೆಯ ಕೂದಲು, ನಾನು ಗಂಡಾಗೇನಾದರೂ ಹುಟ್ಟಿದ್ದಿದ್ದರೆ ಆ ನಿನ್ನ ಕೇಶರಾಶಿಗೆ ನಿನ್ನ ಆರಾಧಕನಾಗಿರುತ್ತಿದ್ದೆ. ಅಷ್ಟು ಕಪ್ಪನೆಯ, ದಪ್ಪನೆಯ, ಉದ್ದದ ಕೇಶವು ಎಂದಿಗೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ನಿನ್ನ ಮುದ್ದು ಮುಖ, ಅದರಲ್ಲಿ ಯಾವಾಗಲೂ ಇರುವ ಮಂದಸ್ಮಿತ ಅದರೊಟ್ಟಿಗೆ ತಿದ್ದಿ ತೀಡಿದಂತಹ ಆ ನಿನ್ನ ಹುಬ್ಬು, ಗೆಳತಿ ಅದನ್ನು ನೋಡಿ ಇಂದಿಗೂ ನಾನು ಹೊಟ್ಟೆ ಕಿಚ್ಚು ಬಿಟ್ಟಿಲ್ಲ. ಹೀಗೆ ಪ್ರತಿ ಹಂತದಲ್ಲೂ ನಿನ್ನನ್ನು ಪ್ರೀತಿಯಿಂದ ಮತ್ತು ಹೊಟ್ಟೆ ಕಿಚ್ಚಿನಿಂದ ಹಲವು ಬಾರಿ ವಿಭಿನ್ನ ಪ್ರತಿಕ್ರಿಯೆ ನೀಡಿರುವೆ.

ನೀನು ನನಗೆ ಗುರುವೂ ಆದೆ, ತಾಯಿಯೂ ಆದೆ. ಅಜ್ಜಿ ಮನೆಯಲ್ಲಿ ಬೆಳೆದ ನನಗೆ ನೀನು ತಾಯಿಯಂತೆ ತುತ್ತು ಹಾಕಿದೆ. ಮಡಿಲಲ್ಲಿ ಮಲಗಲು ಜಾಗ ನೀಡಿದೆ, ಕಣ್ಣೀರು ಬಂದಾಗ ಸಂತೈಸಿದೆ. ಪ್ರತಿ ಕ್ಷಣ ಜೊತೆಯಾಗಿ ಹೆಜ್ಜೆ ಹಾಕಿದೆ. ಇದಲ್ಲವೇ ಹೆಣ್ಣಿನ ತಾಯಿ ಪ್ರೀತಿ. ಮಾತೇ ಆಡದ ನನಗೆ ಮಾತನಾಡುವುದ ಕಲಿಸಿದೆ, ನಿನ್ನನ್ನ ನೋಡ್ತಾ ನೋಡ್ತಾ ನಾನಿಂದು ಉತ್ತಮ ಚರ್ಚಾಪಟುವಾದೆ.

ನೀನು ತುಂಬಾ ಮೃದು ಸ್ವಭಾವದವಳು. ಎಲ್ಲರನ್ನೂ ಪ್ರೀತಿಸುವ, ಗೌರವಿಸುವ, ಆದರಿಸುವ ಗುಣವನ್ನು ಕಂಡು ನಾ ಬೆರಗಾಗಿದ್ದೆ. ಜೊತೆಗೆ ನಾನು ನಿನ್ನನ್ನು ತುಂಬಾ ಮೆಚ್ಚಿದ ಒಂದು ಗುಣ ಅಡುಗೆ. ಒಂದು ಕಾಫಿಯನ್ನೂ ಮಾಡಲು ಬರದ ನನಗೆ ನಿನ್ನ ಕೈರುಚಿ ಬೆರಗುಗೊಳಿಸಿತ್ತು ಎಷ್ಟು ಚಂದಾಗಿ ಅಡುಗೆ ಮಾಡ್ತಾಳೆ ಇವಳು ಎನಿಸಿತ್ತು. ಅದರಲ್ಲೂ ನೀನು ಮಾಡುತ್ತಿದ್ದ ರಸಂ ಇವತ್ತಿಗೂ ನನಗೆ ತುಂಬಾ ಇಷ್ಟ ಇಡೀ ನಿನ್ನ ಮನೆ ಈ ವಿಷಯಕ್ಕೆ ಅಲ್ಲವಾ ನಿನ್ನನ್ನ ತುಂಬಾ ಇಷ್ಟ ಪಡೋದು??

ಅಕ್ಕನಾಗಿ ನೀನು ನಿನ್ನ ತಂಗಿಯ ಜವಾಬ್ದಾರಿ ಹೊತ್ತದ್ದು ಕಂಡು ನೀನೊಬ್ಬ ಜವಾಬ್ದಾರಿಯುತ ಅಕ್ಕ ಎಂದುಕೊಂಡೆ. ಆ ದರೆ ನೀನು ಅವಳ ಬದುಕಿಗೆ ಇಷ್ಟರಮಟ್ಟಿಗೆ ಆಸರೆ ಆಗ್ತೀಯಾ ಅಂತ ಅಂದುಕೊಂಡಿರಲಿಲ್ಲ. ತಂದೆ ತಾಯಿ ಇಲ್ಲದಿದ್ದರೂ ಆ ಕೊರಗನ್ನು ನೀನು ನೀಗಿಸಿದ್ದು ಅಚ್ಚರಿಯೇ ಸರಿ.

ಆದರೆ ಅದ್ಯಾರ ಕಣ್ಣು ಬಿತ್ತೊ ನಮ್ಮ ಸ್ನೇಹಕ್ಕೆ ಇದ್ದಕ್ಕಿದ್ದಂತೆ ನೀ ನನ್ನಿಂದ ದೂರಾದೆ. ಮಾತು ಬಿಟ್ಟೆ ನೀನಿಲ್ಲದೆ ನನ್ನ ಮದುವೆ ಆಯಿತು, ನಾನಿಲ್ಲದೆ ನಿನ್ನ ಮದುವೆಯೂ ಆಯಿತು. ದೂರದ ಬೊಂಬಾಯಿಗೆ ನೀ ಹೊರಟು ಹೋದೆ. ಆದರೆ ನಮ್ಮ ಸ್ನೇಹ, ಪ್ರೀತಿ, ವಿಶ್ವಾಸ ಕಡಿಮೆ ಆಗಲಿಲ್ಲ. ಹಾಗಾಗಿಯೇ ಅಲ್ಲವೇ ಐದು ವರ್ಷದ ನಂತರ ಮತ್ತೆ ನೀ ಬಂದದ್ದು, ಮಾತನಾಡಿಸಿದ್ದು, ಅದೇ ಸ್ನೇಹವಲ್ಲವೇ ನಮ್ಮನ್ನು ಮತ್ತೆ ಒಂದು ಮಾಡಿದ್ದು, ಈ ಸ್ನೇಹ ಮತ್ತೆಂದೂ ಮುರಿಯದಿರಲಿ ಹೀಗೆ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.

**–ಕಾವ್ಯಶ್ರೀ ಎಸ್. ಎನ್**

# ಈ ಜನರನ್ನು ಎತ್ತ ಸಾಗಿಸುತ್ತಿದೆ

ತೇರು ಎಳೆಯುವ ಸಂದರ್ಭದಲ್ಲಿ ತಮಟೆ ಬಡಿಯೋರು ಹೆಣಕ್ಕೂ ತಮಟೆ ಬಡಿಯುವ ಅನಿವಾ ರ್ಯತೆಗೆ ಸಿಕ್ಕಿಬೀಳುತ್ತಾರೆ. ಸಾವು, ಹತಾಶೆ, ನಿರಾಶೆ, ನೋವು, ಒಂದು ಕಡೆಯಾದರೆ ಜಾತ್ರೆ ಹಬ್ಬದ ಸಂಭ್ರಮ ಮತ್ತೊಂದು ಕಡೆ. ಇವೆಲ್ಲವುಗಳ ನಡುವೆ ಕುಲಕಸುಬನ್ನು ಮರೆತು ಐಷಾರಾಮಿ ಬದುಕಿಗೆ ಮುಗಿಬಿದ್ದು ಹಳ್ಳಿ ತೊರೆದವರ ಸ್ಥಿತ್ಯಂತರಗಳು, ತಾಕಲಾಟ, ತೊಳಲಾಟ, ಪಲ್ಲಟ ಈ ಜನರನ್ನು ಎತ್ತ ಸಾಗಿಸುತ್ತಿದೆ.




ತಮಟೆ ಬಾರಿಸುವ ಕುಲಕಸುಬುದಾರ ಯಲ್ಲಪ್ಪ 'ಎಲ್ಲಿ ಅನ್ನ ಹುಟ್ಟುತ್ತೋ ಅದೇ ನಮ್ಮೂರು' ಎನ್ನುವ ಜಾಯಮಾನದವನಲ್ಲ. ಊರ ಗಣ್ಯರಿಂದ ವಾರ್ಷಿಕವಾಗಿ ಪಡೆಯುತ್ತಿದ್ದ 'ಆಯಾ'ಕ್ಕೆ ಈಗ ಕುತ್ತು ಬಂದಿದೆ. ಹಾಗಾಗಿ ಅವನದು ಗೋಣಗಾಟದ ಬದುಕೇ ಆಗಿತ್ತು. ಇದ್ದ ಒಬ್ಬಳೇ ಮಗಳು ದಾಕ್ಷಾಯಿಣಿ, ಕಾಲೇಜು ಶಿಕ್ಷಣ ಮಾಡುತ್ತಿದ್ದಳು. ಅವಳನ್ನು ಸಾಕಲಾಗದಷ್ಟು ಅಸಮ ರ್ಥ, ಅಸಹಾಯಕನಾಗಿದ್ದ. ತಮಟೆಯ ಸದ್ದೇ ಅವನ ಎದೆ ಬಡಿತ ವಾಗಿತ್ತು.

ತಮಟೆಯೇ ಅವನ ಮಾನ–ಪ್ರಾಣ ಸರ್ವಸ್ವವಾಗಿತ್ತು. ಪರಂಪರಾಗತವಾಗಿ ತಮಟೆಗಳ ಸದ್ದಿನಿಂದ ಸಂಭ್ರಮಿಸುತ್ತಿದ್ದ ಹಿಂದಿನ ಜಾತ್ರೆ ಕ್ರಮೇಣ ಬಂಡಾಯ ದನಿಯ ಯುವಪೀಳಿಗೆಗೆ ಹಸ್ತಾಂತರವಾಗಿ ಆಧುನಿಕತೆಯ ರೂಪ ಪಡೆಯುತ್ತದೆ. ಚರ್ಮದ ತಮಟೆ ಬದಲು ಸಿಂಥೆಟಿಕ್ ಬಡಿತದ ವಾದ್ಯಗಳು, ಕಣ್ಣುಗಳನ್ನು ರಾಚಿಸುವ ಬಣ್ಣದ ಫ್ಲೆಕ್ಸ್‌ಗಳು, ಭೂತಾಕಾರದ ಧ್ವನಿವರ್ಧಕಗಳು, ಅರ್ಥ–ವಿಲ್ಲದ ಹುಡುಗರ ಕುಣಿತ ಬದುಕಿನ 'ಪಲ್ಲಟ'ದ ಮತ್ತೊಂದು ಮಗ್ಗುಲಿಗೆ ವಾಲುತ್ತದೆ. ಭಾರತದ ಹಳ್ಳಿಗಳನ್ನು ಹಳೆಯ ಸಂಪ್ರದಾಯಗಳು ಈಗಲೂ ಆಳುತ್ತಿರುವುದು ಸುಳ್ಳಲ್ಲ.

ಹಳ್ಳಿಗಳಲ್ಲಿ ಶೋಷಣೆ ಎಂಬುದು ಶೋಷಣೆಯಂತೆ ಕಾಣುತ್ತಿಲ್ಲ. ವೌಢ್ಯವೆಂಬುದು ಆಚರಣೆಯಾಗಿ ನಂಬಿಕೆ ಗುಲಾಮಗಿರಿಯಾಗಿ ಒಟ್ಟೊಟ್ಟಿಗೆ ಆಳುತ್ತಿರುವ ತಲ್ಲಣಗಳು ಈಗಲೂ ಹಳ್ಳಿಗಳ ಕರುಳನ್ನು ಹಿಂಡುತ್ತಿದೆ. ಇಂಥ ಚಿತ್ರಣವನ್ನು ಒಂದೆಡೆ ಕಟ್ಟಿಕೊಟ್ಟಿರುವ ಸಿನಿಮಾ 'ಪಲ್ಲಟ' ಸಮಾಜದ ಸ್ಥಿತ್ಯಂತರದ ವೈವಿಧ್ಯಮಯ ತಲ್ಲಣಗಳನ್ನು ಅನಾವರಣ ಮಾಡಿದೆ. ಕಥೆ, ಚಿತ್ರಕಥೆ ಹಾಗೂ ನಿರ್ದೇಶನವನ್ನು ಎಸ್.ಪಿ.ರಘುಮಾಡಿದ್ದಾರೆ. ಛಾಯಾ ಗ್ರಹಣ ಲೋಕೇಶ್ ಮೊಸಳೆ, ಸಂಕಲನ, ಸಹ ನಿರ್ದೇಶನ ಎಂ. ಎಸ್.ಸ್ವಾಮಿ, ಸಂಗೀತ ಅಭಿಜಿತ್ ಉನ್ನಿ ನೀಡಿದ್ದರೆ, ಸಂಭಾಷಣೆಯನ್ನು ಆಲೂರು ದೊಡ್ಡನಿಂಗಪ್ಪ ಬರೆದಿದ್ದಾರೆ. ತಾರಾಗಣದಲ್ಲಿ ಅನಿಲ್‌ಕುಮಾರ್, ಅಕ್ಷತಾ ಪಾಂಡವಪುರ, ಲಿಂಗರಾಜು, ರಾಜವಾಡಿ, ರವಿ ರಂಗವಲ್ಲಿ, ಧನ್ಯ ಶ್ರೀಧರ್, ಮಂಗಳಾ, ಮಾಸ್ಟರ್ ಪಂಪ, ಬೇಬಿ ಪ್ರಾರ್ಥನಾ ಮುಂತಾದವರು ಇದ್ದಾರೆ.

**–ಚಂದ್ರಶೇಖರ ಬಿ**

### ನೀರಿನ ಸಮಸ್ಯೆ ಬಗೆಹರಿಸಿ

ಭಾರತದ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಮೈಸೂರು ವಿಶ್ವವಿದ್ಯಾನಿಲಯ ಕೂಡ ಒಂದು. ಮಾನಸ ಗಂಗೋತ್ರಿಯಲ್ಲಿ ನೀರಿನ ಸಮಸ್ಯೆ ತಲೆದೂಗಿದೆ. ಸುತ್ತ ಮುತ್ತಲೆ ಕೆರೆ ಇದ್ದರು ಶೌಚಾಲಯಗಳಲ್ಲಿ ನೀರು ಬರುತಿಲ್ಲ ಗೊತ್ತಿಲ್ಲದೆ ಯಾರಾದರು ಶೌಚಾಲಯಕ್ಕೆ ಹೋದರೆ ಪರದಾಡುವುದಂತು ಖಂಡಿತ. ಶೌಚಕ್ಕೆ ನೀರಿಲ್ಲ ಸರಿ ಎನ್ನ ಬಹುದು. ಆದರೆ ಇಲ್ಲತ ವಿಭಾಗಗಳಲ್ಲು ಕುಡಿಯಲು ನೀರಿಲ್ಲ. ವಿ ವಿಯಲ್ಲಿರುವ ಸಂಬಂಧ ಪಟ್ಟವರು ಕೂಡಲೆ ಸಮಸ್ಯೆ ಬಗೆ ಹರಿಸಬೇಕೆಂದು ವಿನಂತಿ.

**–ಸಚಿನ್ ಆರ್.ಬಿ**

### ಪ್ರಾಣಕ್ಕೇ ಸಂಚಕಾರವಾಗುತ್ತಿರುವ 'ಸೆಲ್ಫಿ' ವ್ಯಾಮೋಹ

**ಮಾನ್ಯರೆ,**

ಇತ್ತೀಚಿನ ವರ್ಷಗಳಲ್ಲಿ ಜನರಲ್ಲಿ, ಅದರಲ್ಲೂ ಮುಖ್ಯವಾಗಿ ಯುವ ಜನತೆಯಲ್ಲಿ ತಮ್ಮ ಮೊಬೈಲ್ ಫೋನ್‌ಗಳಿಂದ 'ಸೆಲ್ಫಿ' ತೆಗೆಯುವ ಹುಚ್ಚು ಹೆಚ್ಚಾಗುತ್ತಿದೆ. ಈ ರೀತಿ 'ಸೆಲ್ಫಿ' ತೆಗೆಯುವ ವೇಳೆಯಲ್ಲಿ ಅನೇಕ ದುರ್ಘಟನೆ ಗಳು ಸಂಭವಿಸುತ್ತಿದ್ದು, ಜನ ತಮ್ಮ ಅಮೂಲ್ಯವಾದ ಪ್ರಾಣವನ್ನೇ ಕಳೆದು ಕೊಳ್ಳುತ್ತಿದ್ದಾರೆ. ಪ್ರವಾಸೀ ತಾಣಗಳಲ್ಲಿ, ಅದರಲ್ಲೂ ಬಹು ಮುಖ್ಯವಾಗಿ ಬೆಟ್ಟ, ಗುಡ್ಡಗಳ ಬಳಿ ಅಥವಾ ನದಿ, ಸರೋವರಗಳಲ್ಲಿ 'ಸೆಲ್ಫಿ' ತೆಗೆಯುವ ಸಂದರ್ಭಗಳಲ್ಲಿ ಪ್ರಾಣಾಪಾಯ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಆದ್ದರಿಂದ ಇನ್ನು ಮುಂದಾದರೂ 'ಸೆಲ್ಫಿ' ತೆಗೆಯುವ ಸಂದರ್ಭಗಳಲ್ಲಿ ಜನತೆ ಅತ್ಯಂತ ಜಾಗೃತಿ ವಹಿಸುವುದು ಒಳ್ಳೆಯದು. ಇಲ್ಲದೇ ಹೋದರೆ ಅವರ ಅಮೂಲ್ಯವಾದ ಪ್ರಾಣವನ್ನೇ . 'ಸೆಲ್ಫಿ' ಕ್ರೇಜ್ ಒಂದು ರೀತಿಯ ಅಂಟುರೋಗದಂತೆ; ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತಿದೆ. ಕೆಲವೊಮ್ಮೆ ಇಂತಹ ಸಂದರ್ಭಗಳಲ್ಲಿ ಪ್ರಾಣಾಪಾಯದ ಜೊತೆಗೆ ಇತರ ಅಮೂಲ್ಯವಾದ ವಸ್ತುಗಳಿಗೂ ಕಂಟಕವಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಇಂತಹ ಅವಘಡಗಳ ಬಗ್ಗೆ ಎಚ್ಚರ ವಹಿಸುವುದು ಒಳ್ಳೆಯದು.

**–ಚಂದ್ರಶೇಖರ್.ಬಿ**

# ಮಳೆರಾಯನಿಗೆ ಜಗ್ಗದ ಜಟ್ಟಿ ಮಯ್ಯಿಯ ಜನರು

ಮೈಸೂರು ಅರಮನೆಲಿ ಕೂತು ಜಂಬೂ ಸವಾರಿ ನೋಡುವಾ ಎಂದು, ಏನೇನೊ ಪ್ರಯತ್ನಗಳ ನಂತರ ಪ್ರವೇಶದ ಪಾಸ್‌ಗಳನ್ನು ಪಡೆದು ಬಂದ ಸಾರ್ವಜನಿಕರಿಗೆ ಕಾದದ್ದು ಬರಿ ಶಾಕ್. ಏಕೆಂದರೆ ಅರಮನೆ ಒಳ ಹೋಗಲು ಪ್ರವೇಶದ್ವಾರದ ಬಳಿ ಬಂದಾಗ ಬೃಹತ್ ಸಂಖ್ಯೆ ಜನಸ್ಥೋಮ ಬಂದವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳುತ್ತಿತ್ತು. ನೂಕಾಟ ತಿಕ್ಕಾಟಗಳೇನೊ ಆಯ್ತು ಆದರೆ ಮಳೆರಾಯ ದಿಢೀರನೆ ಬಂದು ಬಿಟ್ಟನಲ್ಲ.

ಮುಂದಿನ ಕೇಳಬೇಕ ಕಥೆ. ಮೊದಲೆ ನೂಕು ನುಗ್ಗಲು ಜೊತೆಗೆ ಬರ ಸಿಡಿಲಿನಂತೆ ಮಳೆ ಬಂದುಬಿಟ್ಟಿತು. ವಿಧಿಯಿಲ್ಲ. ಕಷ್ಟಪಟ್ಟು ಗಿಟ್ಟಿಸಿಕೊಂಡು ಮತ್ತು ಮೈಸೂರು ದಸರ ಜಂಬೂ ಸವಾರಿಯನ್ನು ಅರಮನೆಯಲ್ಲಿ ನೋಡುವುದೆಂದರೆ ಅದಕ್ಕಿಂತ ಮತ್ತೊಂದು ಸೌಭಾಗ್ಯವುಂಟೆ ಬಂದ ಮೇಲೆ ಹಿಂತಿರುಗುವುದುಂಟ. ಸೀದ ಮಳೆಗೆ ಮೈಹೊಡ್ಡುತ ಒಳ ನಡೆದರು ಆದರೆ ತಂದ ಪಾಸಿಗೆ ಅಲ್ಲಿ ಬೆಲೆಯೇ ಇರಲಿಲ್ಲ. ಏಕೆಂದರೆ ತಪಾಸಣೆ ಮಾಡಿ ಒಳ ಬಿಡುತ್ತಿದ್ದ ಪೋಲೀಸರನ್ನೆ ಮಳೆ ಬಿಡಲಿಲ್ಲ.

ಅಂತೊ ಇಂತೊ ತಳ್ಳಾಡಿ, ನೂಕಾಡಿಕೊಂಡು ಬೆಲೆಯಿಲ್ಲದ ಪಾಸನ್ನು ಮುದಿರಿಕೊಂಡು ಮಳೆಯೊಂದಿಗೆ ಒಳ ಹೋದವರಿಗೆ ಮತ್ತೊಂದು ಅದ್ಭುತ ಕಾದಿತ್ತು ಅದುವೆ ಆಸನದ ಕೆಳಗಿರಬೇಕಾದ ಕುರ್ಚಿಗಳು ಶಿರದ ಮೇಲಿದ್ದವು. ಅಂದರೆ ಜನರು ಮಳೆಯಿಂದ ರಕ್ಷಣೆಗಾಗಿ ಕುರ್ಚಿಗಳನ್ನು ಹೊತ್ತಿಕೊಂಡು ನಿಂತಿ–ದ್ದರು, ಅಲ್ಲಿದ್ದವರಿಗೆ ಜಾಗವಿರಲಿಲ್ಲ,



ಕೆಲವರು ಮೂಲೆ ಮೂಲೆಗೆ ಸೇ–ರಿಕೊಂಡಿದ್ದರು. ಈಗ ಬಂದವರಿಗೆ ಬಂದಮೇಲೆ ಹೊರ ಹೋಗುವಾಗಿಲ್ಲ ಒಳ ಇರಲು ಮಳೆ ಬಿಡುತ್ತಿಲ್ಲ ಅಂತ ಪರಿಸ್ಥಿತಿ ಉದ್ಭವಿಸಿತು. ಯಾಕಾದರು ಬಂದೆವೊ ಅನಿಸಿಬಿಟ್ಟಿತ್ತು.

ಅಷ್ಟರಲ್ಲೆ ಮಳೆರಾಯ ಸ್ವಲ್ಪ ಬಿಡುವುಕೊಟ್ಟ. ಆದರೆ, ನಿಂತೇ ಬಿಡಲಿಲ್ಲ. ಮೊದಲೆ ತಡವಾಗಿ–ತ್ತು ತರಾತುರಿಯಲ್ಲಿ ಬಂದ ಸಿಎಂ ಮತ್ತು ಅವರ ಬಳಗ ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಜಂಬೂ ಸವಾ–ರಿಗೆ ಚಾಲನೆ ನೀಡಿದರು. ಆದರೆ, ಅಷ್ಟರಲ್ಲೆ ಮತ್ತೆ ಬಂದ ಮಳೆರಾಯ ನೋಡಿ. ಪಟ ಪಟನೆ ಮಳೆ ಹನಿಗಳು ಧರೆಗುರುಳಿದವು. ಕೊಡೆಗಳ ಆಶ್ರಯ ಪಡೆದವರಂತು ಮಳೆಯಲ್ಲಿ ನೆನೆಯವರನ್ನು ನೋಡಿ ಗಹಗಹಿಸುತ್ತ ನಗುತ್ತಿದ್ದರು. ಅವರಿಗೇನುಗೊತ್ತು ಮಳೇಲಿ ಮಿಂದುತ್ತಿರುವವರ ಸಂಕಟ. ಪುಟ್ಟ ಪುಟ್ಟ ಮಕ್ಕಳ ಕಷ್ಟ ಕೇಳುವಂತಿರಲಿಲ್ಲ.

ಒಂದೆಡೆ ಅರಮನೆಯ ಮುಂದೆ ಜನರು ಮಳೆಯಿಂದ ತಪ್ಪಿಸಿಕೊಳ್ಳಲು ಸರ್ಕಸ್ ಮಾಡುತ್ತಿದ್ದರೆ. ಅರಮನೆ ಮೇಲೆ ಕೂತ ದೊಡ್ಡವರ ಕಡೆಯವರು ಸರ್ಕಸ್ ನೋಡುವವರಂತೆ ಕೂತಿ–ದ್ದರು. ಜಂಬೂ ಸವಾರಿಯನ್ನು ನೋಡಲು ಸಾರ್ವಜನಿಕರಿಗೆ ಹಾಕಿದ್ದ ವೇದಿಕೆಗೆ ಹಾಕಿದ್ದ ಪ್ಲಾಸ್ಟಿಕ್ ನೆಲಹಾಸು ಒದ್ದೆಯಾಗಿದ್ದರಿಂದ ಮಳೆಯಿಂದ ತಪ್ಪಿಸಿಕೊಳ್ಳಲೋದವರು ಜಾರಿ ಬಿದ್ದು ಒದ್ದಾಡಿದರು. ರಕ್ಷಣೆ ಮಾಡಲು ಬಂದಿದ್ದ ಪೋಲೀಸರಿಗೆ ಮಳೆಯಿಂದ ರಕ್ಷಣೆಯಿರಲಿಲ್ಲ ಮಳೆಯಲ್ಲೆ ತಮ್ಮ ಕೆಲಸ ಮಾಡುತ್ತಿದ್ದರು. ಇನ್ನೂ ಅರಮನೆಯೋಳಗೆ ಬರಲು ಸಾರ್ವಜನಿಕರಿಗೆ ನಿಬಂಧನೆ ವಿದಿಸಿದ್ದರಿಂದ ಭರ್ಜರಿ ವ್ಯಾವಹಾರದ ನಿರೀಕ್ಷೆಯಲ್ಲಿದ್ದ ಸಣ್ಣಪುಟ್ಟ ವ್ಯಾಪಾರಿಗಳ ಮುಖ ನೋಡಲಾಗುತ್ತಿರಲಿಲ್ಲ.

ಒಟ್ಟಿನಲ್ಲಿ ಮಳೆರಾಯನ ಕಾಟಕ್ಕೆ ಜಗ್ಗದ ಜಟ್ಟಿ ಮಯ್ಯಿಯ ಜನರು ದಸರ ಅಂಬಾರಿ ನೋಡೆ ಹೊರಡುವ ಗಟ್ಟಿ ಮನಸ್ಸು ಮಾಡಿಕೊಂಡು ಕೂತಿದ್ದರು. ಆರಾಮಾಗಿ ಕೂತು ನೋಡಲೆಂದು ಬಂದವರಿಗೆ ನಿಂತು ನೋಡುವಂತೆ ಮಳೆರಾಯ ಮಾಡಿಬಿಟ್ಟ. ಯಾವುದೆ ವಿಘ್ನಗಳಿಲ್ಲದೆ ಜಂಬೂ ಸವಾರಿ ನಡೆದರು ಮಳೆರಾಯ ಸ್ವಲ್ಪ ಬೇಸರ ತರಿಸಿಬಿಟ್ಟ.

[illegible] ಕಾರ್ಯಕ್ರಮಗಳಿಗೆ ಹೋದರೆ ಏನಿಲ್ಲದಿದ್ದರು ಪೋಲೀಸರ ಕಾಟ ತಪ್ಪುವುದಿಲ್ಲ ಎನ್ನುವವರೆ ಹೆಚ್ಚು. ಆದರೆ, ಜಂಬೂ ಸವಾ–ರಿಯಲ್ಲಿ ಅವರನ್ನು ನೋಡಿ ಕೈ ಮುಗಿಬೇಕೆನಿಸುತ್ತಿತ್ತು. ಒಂದೆಡೆ ಅರಮನೆ ಒಳ ಹೋಗಲು ನೂಕು ನುಗ್ಗಲು ಉಂಟಾಗಿತ್ತು, ಮಳೆಯ ಕಾಟ ಬೇರೆ ಪೋಲೀಸರು ತಮ್ಮೆಲ್ಲ ನಿಬಂಧನೆಗಳನ್ನು ಸರಿಸಿ ಅವರನ್ನು ಒಳಬಿಟ್ಟರಲ್ಲದೆ ಮಳೆಗೆ ವಿಚಲಿತರಾಗದೆ ಮೈಹೊಡ್ಡಿ ನಿಂತಿ–ದ್ದರು. ಮಹಿಳಾ ಪೋಲೀಸರು ಅಷ್ಟೇ.

ಇವೆಲ್ಲವುಗಳ ಜೊತೆಗೆ ಪ್ರದರ್ಶನಕ್ಕೆಂದು ದಸರ ಪಥ–ದಲ್ಲಿ ಬಂದ ಸ್ತಬ್ಧಚಿತ್ರಗಳು ರೇಸ್‌ಗೆ ಬಿದ್ದವರಂತೆ ಓಡುತ್ತಿದ್ದವು ಏಕೆಂದರೆ ಮೊದಲೆ ಮಳೆ ಬಂದರಿಂದ ತಡವಾಗಿತ್ತು. ಇನ್ನೂ ತಡಮಾಡಿದರೆ ತಲುಪುವುದು ತಡವಾದಿತು ಎಂದು ವೇಗವಾಗಿ ಓಡಿಸುತ್ತಿದ್ದರು. ಇಷ್ಟೆಲ್ಲ ಅವಾಂತರಗಳೆಲ್ಲವು ಆದದ್ದು ಬರಿ ಅರಮನೆಯೊಳಗೆ ಅಷ್ಟೆ ಆದ–ರೆ ಅರಮನೆ ಹೊರ ಹೊದಂತೆ ಎಲ್ಲಾ ಸುಸೂತ್ರವಾಗಿ ನೆರವೇ–ರಿತು. ಎಂದಿನಂತೆ ಅರ್ಜುನ ಐದನೆ ಬಾರಿ ಚೆನ್ನದ ಅಂಬಾರಿ ಹೊತ್ತು ಗಾಂಭೀರ್ಯದಿಂದ ಮೈಸೂರಿನ ರಾಜಪಥಗಳತ್ತ ಸಾಗಿದ.

**–ಅಕ್ಷಯ್.ಕೆ**

# ಡಬಲ್ ಮೀನಿಂಗ್ ಡೈಲಾಗ್‌ಗಳ ಸರಮಾಲೆ




ಭಯಂಕರ ಡಬಲ್ ಮೀನಿಂಗ್ ಡೈಲಾಗ್‌ಗಳ ಸರಮಾಲೆಯೇ ನೀರ್ ದೋಸೆ, ಎಲ್ಲಾ ತರಹದ ಪ್ರೇಕ್ಷಕರ ಮೆಚ್ಚುಗೆ ಗಳಿಸಿದೆ. ಜಗ್ಗೇಶ್ ಅವರ ಡೈಲಾಗ್ ಡೆಲಿವರಿ, ಮುಖಭಾವ, ಹರಿಪ್ರಿಯ ಅವರ ಬೋಲ್ಡ್ ನಟನೆ



ಅದ್ಭುತವಾಗಿ ಮೂಡಿಬಂದಿದೆ. ಭಾವನೆಗಳ ತಾಕಲಾಟದ ಕ ಥೆಯುಳ್ಳ ನೀರ್ ದೋಸೆ ಪ್ರೇಕ್ಷಕರ ಮನಮುಟ್ಟುತ್ತದೆ. ನವರಸ ನಾಯಕ ಜಗ್ಗೇಶ್, ನಟಿ ಹರಿಪ್ರಿಯಾ, ಹಿರಿಯ ನಟ ದತ್ತಣ್ಣ ಮತ್ತು ನಟಿ ಸುಮನ್ ರಂಗನಾಥ್ ಅವರು ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ.

ನೀರವತೆಯನ್ನು ನೀಗಿಸುವ ಚಿತ್ರ ನೀರ್ ದೋಸೆ ಖಡಕ್ ರೊಟ್ಟಿಯಾಗಿ ಅಜೀರ್ಣವಾದರೂ, ಚಿತ್ರ ನೋಡುವಾಗ ನಿರ್ದೇಶಕರು ನೀರ್ ದೋಸೆಗೆ ಕೊಟ್ಟಿರುವ ಟೈಟಲ್ ಟ್ಯಾಗ್ ಲೈನ್ ನೆನಪಿಗೆ ಬರುತ್ತದೆ. ಮೌನ, ತಾಳ್ಮೆ, ಸಹನೆ ದೌರ್ಬಲ್ಯವಲ್ಲ. ಅವು ಅಸ್ತ್ರ. ಅದು ಸಿನಿಮಾದಲ್ಲಿ ಕಾಣುತ್ತದೆ.

ಅವಿವಾಹಿತ ಮಧ್ಯವಯಸ್ಕ ಜಗ್ಗೇಶ್ ಕುಮಾರ್ (ಜಗ್ಗೇಶ್) ಹೆಣ ಸಾಗಿಸುವ ವ್ಯಾನ್ ಡ್ರೈವರ್, ಬ್ರಹ್ಮಚಾರಿಯಾಗಿಯೇ ಉಳಿದ ವೃದ್ಧ ದತ್ತಾತ್ರೇಯ (ದತ್ತಣ್ಣ), ತನ್ನ ಸಡಿಲ ಸ್ವಭಾವದಿಂದ ಸೆಕ್ಸ್ ವರ್ಕರ್ ಆದ ಹುಡುಗಿ ಕುಮುದಾ (ಹರಿಪ್ರಿಯಾ), ಮೂಲಾ ನಕ್ಷತ್ರದಲ್ಲಿ ಹುಟ್ಟಿ ಮದುವೆಯಾಗದೆ ಉಳಿದ ಹುಡುಗಿ ಶಾರದಾ ಮಣಿ(ಸುಮನಾ ರಂಗನಾಥ್) ಈ ನಾಲ್ವರ ಬದುಕಿನ ಕಥೆಯೇ ಇಡೀ ಸಿನಿಮಾ.

ಈ ಚಿತ್ರದಲ್ಲಿ ಡಬಲ್ ಮೀನಿಂಗ್ ಡೈಲಾಗ್‌ಗಳು ಇದ್ದು, ಅದರೊಟ್ಟಿಗೆ ಜೀವನದ ಸಾರ ಸಾರುವ ಸಂಭಾಷಣೆಯೂ ಇದೆ. ಸಂಭಾಷಣೆ ಸಿನಿಮಾದ ನಿಜವಾದ ನಾಯಕ. ಇಲ್ಲಿ ಗಟ್ಟಿಯಾದ ಕಥಾ ಹಂದರ ಹುಡುಕುವ ಸಾಹಸ ಮಾಡಿದರೆ ಅರ್ಥವಿಲ್ಲ.

ಬದುಕಿನ ಜಂಜಾಟಗಳು, ಮದುವೆಗೆ ಮೀರಿದ ಸಂಬಂಧ, ಆಧುನಿಕ ಪ್ರಪಂಚದ ಅಗತ್ಯಗಳು, ನಕ್ಷತ್ರ–ಜಾತಕ, ವೇಶ್ಯೆಯಲ್ಲೂ ಅಡಗಿದ ಗಂಗೆಯ ಮನಸ್ಸು, ಹೆಣ ಸಾಗಿಸುವ ವಾಹನದ ಚಾಲಕನ ಹೆಣಗಾಟದ ಬದುಕು, ಬ್ರಹ್ಮಚಾರಿಯ ಜೀವನ ಬಾಧೆಗಳು, 32 ದಾಟಿದರೂ ಮದುವೆಯಾಗದ ಮಧ್ಯಮ ವರ್ಗದ ಹೆಣ್ಣುಮಗಳ ನೇರ ಮಾತುಗಳು ಎಲ್ಲವೂ ಚಿತ್ರದಲ್ಲಿದ್ದು, ಡೈಲಾಗ್‌ಗಳಿಂದಲೇ ಓಡುವ ಸಿನಿಮಾ ಮಧ್ಯೆ ಮಧ್ಯೆ ಗಂಭೀರವಾಗುತ್ತದೆ, ಜೊತೆಗೆ ಕಣ್ಣಲ್ಲಿ ನೀರು ತರಿಸುತ್ತದೆ.

– ಕಾವ್ಯಶ್ರೀ ಎಸ್. ಎನ್

## 2016ರ ದಸರ ವಿಶೇಷ ಚಿತ್ರಗಳು












# ಕ್ರೀಡೆಯಲ್ಲಿ ಭಾಗವಹಿಸಲು ದೈಹಿಕ ಆರೋಗ್ಯ ಮುಖ್ಯ



**ಇಲವಾಲದ ಸೇಂಟ್ ಜೋಸೆಫ್ ಸೆಂಟ್ರಲ್ ಹೈಸ್ಕೂಲ್ ವಿದ್ಯಾರ್ಥಿನಿಯರ ತಂಡದೊಂದಿಗೆ ಗುಂಡ್ಲುಪೇಟೆ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಎಸ್.ರಾಜಶೇಖರ್, ರೋಟರಿ ಮೈಸೂರಿನ ಮಾಜಿ ಅಧ್ಯಕ್ಷ ಎಚ್.ಎಸ್.ವೆಂಕಟೇಶ್, ಮೈವಿವಿ ದೈಶಿ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ, ಡಾ.ಪಿ.ಕೃಷ್ಣಯ್ಯ ಇತರರು ಚಿತ್ರದಲ್ಲಿದ್ದಾರೆ.**

ಸೆ. 2 – ಕ್ರೀಡೆಗಳಲ್ಲಿ ಸಕ್ರೀಯವಾಗಿ ತೊಡಗಲು ದೈಹಿಕ ಆರೋಗ್ಯವು ಬಹಳ ಮುಖ್ಯವಾಗಿರುತ್ತದೆ. ವಿದ್ಯಾರ್ಥಿಗಳು ಪೌಷ್ಟಿಕ ಆಹಾರ ಸೇವನೆಯಿಂದ ದೇಹ ಮತ್ತು ಮನಸ್ಸುಗಳನ್ನುಆರೋಗ್ಯವಾಗಿ–ರಿಸಿಕೊಂಡು ಕ್ರೀಡಾ ಸಾಧನೆಗೆ ಮುಂದಾಗ ಬೇಕೆಂದು ಗುಂಡ್ಲುಪೇಟೆ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಹಾಗೂ ಗುಂಡ್ಲುಪೇಟೆ ಪುರಸಭೆ ಮಾಜಿ ಅಧ್ಯಕ್ಷ ಎಸ್.ರಾಜಶೇಖರ್ ಅಭಿಪ್ರಾಯಪಟ್ಟರು. ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಲುಮಿನಿ ಅಸೋಸಿಯೇಷನ್ ನಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಬಾಲಕರ ಕಬಡ್ಡಿ ಮತ್ತು ಬಾಲಕಿಯರ ಥ್ರೋ ಬಾಲ್ ಪಂದ್ಯಾವಳಿ ವಿಜೇತ–ರಿಗೆ ಬಹುಮಾನ ವಿತರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲಕರ ಕಬಡ್ಡಿ ಮತ್ತು ಬಾಲಕಿಯರ ಥ್ರೋಬಾಲ್ ಪಂದ್ಯಾವಳಿಗಳಲ್ಲಿ ಜಿಲ್ಲೆಯ ವಿವಿಧ ಶಾಲೆಗಳಿಂದ ಆಗಮಿಸಿದ್ದ ಒಟ್ಟು 18 ತಂಡಗಳು ಪಾಲ್ಗೊಂಡಿದ್ದವು. ಬಾಲಕಿಂಯರ ಥ್ರೋಬಾಲ್ ವಿಭಾಗದಲ್ಲಿ ಇಲವಾಲದ ಸೆಂಟ್ ಜೋಸೆಫ್ ಸೆಂಟ್ರಲ್ ಹೈಸ್ಕೂಲ್ ಪ್ರಥ 'ಮ ಹಾಗೂ ವಿಜಯ ನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಹೈಸ್ಕೂಲ್ ದ್ವಿತೀಯ ಸ್ಥಾನ ಪಡೆದವು.

ಬಾಲಕರ ವಿಭಾಗದ ಕಬಡ್ಡಿ ಯಲ್ಲಿಮೇದರ ಬ್ಲಾಕ್ ಸರ್ಕಾರಿ ಪ್ರೌಢ ಶಾಲೆ ಪ್ರಥಮ ಸ್ಥಾನ ಪಡೆದರೆ, ಮ ರಿಮಲ್ಲಪ್ಪ ಪ್ರೌಢ ಶಾಲೆ ದ್ವಿತೀಯ ಸ್ಥಾನವನ್ನು ಗಳಿಸಿತು. ವಿಜೇತ ತಂಡಗಳಿಗೆ ಕಪ್ ಹಾಗೂ ನಗದು ಬಹುಮಾನವನ್ನು ನೀಡಲಾಯಿತು.ಗುಂಡ್ಲುಪೇಟೆ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಎಸ್.ರಾಜಶೇಖರ್, ರೋಟರಿ ಮೈಸೂರಿನ ಮಾಜಿ ಅಧ್ಯಕ್ಷ ಎಚ್. ಎಸ್.ವೆಂಕಟೇಶ್, ಮೈವಿವಿ ದೈಹಿಕ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ, ಮತ್ತು ಡಾ.ಪಿ.ಕೃಷ್ಣಯ್ಯ ಇತರರು ಭಾಗವಹಿಸಿದ್ದರು.

# ಜನಸಂಖ್ಯಾ ಸ್ಫೋಟದಿಂದ ಪರಿಸರ ನಾಶ

ದೇಶದಲ್ಲಿ ಹೆಚ್ಚಳ ವಾಗುತ್ತಿರುವ ಜನಸಂಖ್ಯಾ ಸ್ಫೋಟದಿಂದ ಶೇ.40ರಷ್ಟು ಪರಿಸರ ನಾಶವಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನಿ ಟಿ. ತಿಪ್ಪೇಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನಗರದ ಮಹಾರಾಣಿ ಕಾಲೇಜಿ ನಲ್ಲಿ ಸೋಮವಾರ ಏರ್ಪಡಿಸಿದ್ದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಯ ಲಕ್ಷ್ಮಮ್ಮಣ್ಣಿ ರೇಂಜರ್ ಘಟಕಗಳ ದೈನಂದಿನ ಚಟುವಟಿಕೆಗಳ ಉದ್ಘಾ ಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾಗತಿಕ ತಾಪಮಾನ ಹೆಚ್ಚು ತ್ತಿದ್ದು, ಭೂಮಿಯ ಮೇಲೆ ವಾಸ ಮಾಡುವುದೇ ಕಷ್ಟಕರವಾಗುತ್ತಿದೆ. ಮನುಷ್ಯನಿಗೆ ಜ್ವರ ಬಂದಾಗ ಒಂದೆರಡು ಡಿಗ್ರಿ ವ್ಯತ್ಯಾಸವಾದಲ್ಲಿ ಅವನ ಶರೀರ ಹೇಗೆ ಬಲಹೀನವಾಗುತ್ತದೆಯೋ ಹಾಗೆಯೇ ಭೂಮಿಯ ತಾಪಮಾನದಲ್ಲಿ ಸ್ವಲ್ಪ ವ್ಯತ್ಯಾಸ ವಾದರೂ ಬಿಸಿಲು, ಶಾಖ ಹೆಚ್ಚಾ ಗುತ್ತದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಸಹಾಯಕ ಜಿಲ್ಲಾ ಸಂಘಟಕ ಕೆ.ಜಿ.ಗೋಪಾಲಕೃಷ್ಣ, ದೇಶ ಸೇವೆ ಮಾಡಲು ಯುವಕರು ಸನ್ನದ್ಧರಾಗಬೇಕು ಎಂಬ ತರಬೇತಿ ಯನ್ನು ಮಕ್ಕಳಿಗೆ ಇಲ್ಲಿ ನೀಡ ಲಾಗುತ್ತದೆ. ರೇಂಜರ್, ರೋವರ್‌ಗಳಿಗೆ 3 ತಿಂಗಳ ತರಬೇತಿ, 6 ತಿಂಗಳ ನಿಪುಣ್ ತರಬೇತಿ, 9 ತಿಂಗಳ ರಾಜ್ಯ ಪುರ ಸ್ಕಾರ್ ತರಬೇತಿ ಹಾಗೂ 1 ವರ್ಷದ ರಾಷ್ಟ್ರ ಪುರಸ್ಕಾರ ತರ ಬೇತಿಗಳನ್ನು ಹಂತ–ಹಂತವಾಗಿ ಮಕ್ಕಳಿಗೆ ನೀಡಲಾಗುವುದು ಎಂದರು.



ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಘಟಕದ ಸಂಚಾಲಕಿ ಪ್ರೊ. ಎಂ.ದೇವಮ್ಮಣ್ಣಿ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ವಿಜ್ಞಾನ ಪ್ರಾಧ್ಯಾಪಕ ಸಂತೋಷ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಟಿ.ವಿಜಯ್ ಉಪ ಸ್ಥಿತರಿದ್ದರು..

ಮೈಸೂರಿನ ಮಹಾ ರಾಣಿ ಕಾಲೇಜಿನಲ್ಲಿ ಸೋಮ ವಾರ ಏರ್ಪಡಿಸಿದ್ದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಯಲಕ್ಷ್ಮಮ್ಮಣ್ಣಿ ರೇಂಜರ್ ಘಟಕಗಳ ದೈನಂದಿನ ಚುಟುವಟಿ–ಕೆಗಳನ್ನು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಸಹಾಯಕ ಜಿಲ್ಲಾ ಸಂಘಟಕ ಕೆ.ಜಿ.ಗೋಪಾಲಕೃಷ್ಣ ಉದ್ಘಾಟಿಸಿದರು. ಟಿ.ತಿಪ್ಪೇಸ್ವಾಮಿ, ಪ್ರೊ.ಎಂ.ದೇವಮ್ಮಣ್ಣಿ, ಸಂತೋಷ್ ಕುಮಾರ್, ಪ್ರೊ.ಬಿ.ಟಿ.ವಿಜಯ್ ಅವರನ್ನು ಚಿತ್ರದಲ್ಲಿ ಕಾಣಬಹುದು.